# ಕರ್ನಾಟಕ ವಿಧಾನ ಸಭೆ

# KARNATAKA LEGISLATIVE ASEMBLY

ಸೋಮವಾರ ೨೯ನೇ ಆಗಸ್ಟ್ ೧೯೯೪, ಭಾದ್ರಪದ, ಶಕ ೧೯೧೬

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ವಿ. ಎಸ್. ಕೌಜಲಗಿ) ಪೀಠವನ್ನು ಅಲಂಕರಿಸಿದ್ದರು.

## ಪ್ರಶ್ನೋತ್ತರ

## ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

**ಹಾಸನ ನಗರ ಬೈಪಾಸ್ ರಸ್ತೆ**

24 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಬೆಂಗಳೂರು - ಮಂಗಳೂರು ರಾಷ್ಟ್ರೀಯ ಹೆದ್ದಾರಿಯನ್ನು ಹಾಸನ ನಗರದ ಬಳಿ ಬೈಪಾಸ್ ರಸ್ತೆ ಮಾಡಲು ಯೋಜಿಸಿರುವುದು ನಿಜವೇ?*

ಆ) *ಹಾಸನ ನಗರದ ಮೂಲಕ ಹಾಯ್ದು ಹೋಗುವ ಬೆಂಗಳೂರು - ಮಂಗಳೂರು ಹೆದ್ದಾರಿ ಬಹಳ ಇಕ್ಕಟ್ಟಾಗಿದ್ದು, ವಾಹನ ದಟ್ಟಣೆಯಿಂದ ಕೂಡಿದ್ದರೂ ಬೈಪಾಸ್ ರಸ್ತೆ ನಿರ್ಮಾನವಾಗಿರಲು ಕಾರಣವೇನು?*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ನಿಜ

ಆ) ಈ ಕಾಮಗಾರಿಯು ಇನ್ನೂ ಪ್ರಸ್ತಾವನೆ ಹಂತದಲ್ಲಿರುವುದರಿಂದ ನಿರ್ಮಾನವಾಗುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಮಾನ್ಯ ಅಧ್ಯಕ್ಷರೇ, ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿಯನ್ನು ಹಾಸನ ನಗರದ ಬಳಿ ಬೈಪಾಸ್ ರಸ್ತೆ ಮಾಡಲು ಯೋಜಿಸಿರುವುದು ನಿಜವೇ ಎಂದು ಪ್ರಶ್ನೆ ಕೇಳಿರುವುದಕ್ಕೆ 'ನಿಜ' ವೆಂದು ಸಚಿವರು ಉತ್ತರ ಕೊಟ್ಟಿದ್ದಾರೆ. ಈ ಯೋಜನೆ ಎಂದಿನಿಂದ ಶುರುವಾಯಿತು? ಸುಮಾರು 1962ನೇ ಇಸವಿಯಲ್ಲಿ ಈ ಯೋಜನೆ ಹಮ್ಮಿಕೊಂಡಿದ್ದು ಅಂದಿನಿಂದಲೂ ಈ ಬೈಪಾಸ್ ರಸ್ತೆ ಯೋಜನೆ ಪೂರ್ಣಗೊಂಡಿಲ್ಲವೇ? ಸದರಿ ಯೋಜನೆ ಇದುವರೆವಿಗೂ ಮಂಜೂರಾಗದಿರುವುದಕ್ಕೆ ಕಾರಣವೇನು?

ಶ್ರೀ ಕೆ.ಎಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, ಈ ಯೋಜನೆಯನ್ನು ಬಹಳ ಹಿಂದೆಯೇ ತೆಗೆದುಕೊಳ್ಳಲಾಗಿದ್ದು 1988ರ ಸುಮಾರಿಗೆ ಇದಕ್ಕೆ ಅಗತ್ಯವಾಗಿ ಬೇಕಾಗಿರತಕ್ಕ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಇದಕ್ಕೆ ಕೇಂದ್ರ ಸರ್ಕಾರದಿಂದ ಅನುಮತಿ ಬರಬೇಕಾಗಿದೆ, ಅನುಮತಿ ಸಿಕ್ಕಿದ ನಂತರ ಮುಂದಿನ ವರ್ಷದ ಆಯವ್ಯಯದಲ್ಲಿ ಅದನ್ನು ಸೇರ್ಪಡೆಗೊಳಿಸಲಾಗುತ್ತದೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : 1962ರಲ್ಲಿ ಸದರಿ ಬೈಪಾಸ್ ರಸ್ತೆ ಯೋಜನೆ ಮಾಡಬೇಕೆಂದು ಸರ್ಕಾರ ತೀರ್ಮಾನ ತೆಗೆದುಕೊಂಡಿದ್ದು 1988ರ ಸುಮಾರಿಗೆ

ಅಗತ್ಯವಾದ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದೇವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಈಗ 1994ನೇ ಇಸವಿಯಲ್ಲಿ ನಾವಿದ್ದೇನೆ. 1962ರಲ್ಲಿ ಹಾಸನದ ಜನಸಂಖ್ಯೆ 30,000 ಇತ್ತು, ಈಗ ಒಂದೂಕಾಲು ಜನಸಂಖ್ಯೆ ಮೀರಿದೆ. ಅಲ್ಲಿರುವ ರಸ್ತೆ ಬಹಳ ಇಕ್ಕಟ್ಟಾಗಿರುವುದಲ್ಲದೆ ವಾಹನ ಸಂಚಾರ ಬಹಳ ಒತ್ತಡದಿಂದ ಕೂಡಿದ್ದು ಜನರು ತಿರುಗಾಡುವಂಥ ಸ್ಥಿತಿಯಲ್ಲಿಲ್ಲ. ಆದುದರಿಂದ, ಯೋಜನೆ ಕೈಗೊಳ್ಳಲು ಕೇಂದ್ರ ಸರ್ಕಾರದ ಅನುಮತಿಗಾಗಿ ಕಾಯಲಾಗುತ್ತಿದೆಯೆಂದು ಹೇಳುತ್ತಿದ್ದೀರಿ. ರಾಷ್ಟ್ರೀಯ ಹೆದ್ದಾರಿಯ ಎಲ್ಲಾ ಕಡೆ ಬೈಪಾಸ್ ರಸ್ತೆ ಮಾಡುತ್ತಿರುವಾಗ ಹಾಸನ ನಗರದಲ್ಲಿ ಜನದಟ್ಟಣೆ ಇರುವುದರಿಂದ ಆದಷ್ಟು ಬೇಗ ಬೈಪಾಸ್ ರಸ್ತೆ ಮಾಡಬೇಕಾಗಿರುವುದು ಅಗತ್ಯವಲ್ಲವೇ?

ಶ್ರೀ ಕೆ. ಎಚ್. ರಂಗನಾಥ್ : ಆದಷ್ಟು ಬೇಗ ಬೈಪಾಸ್ ರಸ್ತೆಯನ್ನು ಮಾಡಬೇಕೆಂಬುದೇ ಸರ್ಕಾರದ ಚಿಂತನೆಯಾಗಿದೆ. ಆದರೆ, ಈ ಯೋಜನೆಗೆ ಪೂರ್ಣ ಹಣವನ್ನು ಕೇಂದ್ರ ಸರ್ಕಾರವೇ ಕೊಡುವುದರಿಂದ ಅವರ ಒಪ್ಪಿಗೆಗಾಗಿ ಕಾಯಬೇಕಾಗಿರುತ್ತದೆ. ರಾಜ್ಯ ಸರ್ಕಾರ ಈ ಬಗ್ಗೆ ಎಲ್ಲಾ ರೀತಿಯ ಅಗತ್ಯ ಕ್ರಮ ಕೈಗೊಂಡಿದೆ. ಈ ಕುರಿತ ಪ್ರಸ್ತಾವನೆ ಕೇಂದ್ರ ಸರ್ಕಾರಕ್ಕೆ 1992ರಲ್ಲಿ ಹೋಗಿದ್ದು, 1993ರಲ್ಲಿ ಮತ್ತೆ ಕೆಲವು ವಿವರಣೆಯನ್ನು ಕೇಳಿದ್ದರು. ಅದನ್ನು ಮತ್ತೆ ನಾವು ಪರಿಶೀಲಿಸಿ ಪುನಃ ವಾಪಸ್ ಕಳುಹಿಸಿದ್ದೇವೆ. ಸದರಿ ಯೋಜನೆಯನ್ನು ಬಹುಶಃ ಮುಂದಿನ ವರ್ಷದಲ್ಲಿ ತೆಗೆದುಕೊಳ್ಳಬಹುದು.

**ವಿದ್ಯುತ್ ಉಪಕೇಂದ್ರದ ಮಂಜೂರಾತಿ**

461 - ಶ್ರೀ ಎನ್. ತಮ್ಮಣ್ಣ (ಕೆರಗೂಡು) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ಮಂಡ್ಯ ತಾಲ್ಲೂಕು ಕೆರಗೋಡು ಹೋಬಳಿ ಹಂಪಾಪುರ ಗ್ರಾಮದಲ್ಲಿ 250 ಕೆ.ವಿ. ಪವರ್ ಸಬ್-ಸ್ಟೇಷನ್ ಮಂಜೂರು ಮಾಡುವ ವಿಚಾರ ಸರ್ಕಾರದ ಗಮನದಲ್ಲಿದೆಯೇ?*

*ಆ) ಹಾಗಿದ್ದಲ್ಲಿ ಇದರ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ಇದರ ಅಂದಾಜು ವೆಚ್ಚವೆಷ್ಟು? ಇದರಿಂದ ಜಿಲ್ಲೆಯ ವಿದ್ಯುಚ್ಛಕ್ತಿ ಅಭಾವ ಕಡಿಮೆಯಾಗುವುದೆ?*

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಹೌದು

ಆ) ನಿರ್ಮಾಣ ಕಾರ್ಯವನ್ನು ಜನವರಿ 95ರ ವೇಳೆಗೆ ಪ್ರಾರಂಭಿಸಲು ಉದ್ದೇಶಿಸಿದೆ. ನಿರ್ಮಾಣ ಕಾರ್ಯಗಳಿಗೆ ತಗಲುವ ಒಟ್ಟು ಅಂದಾಜು ವೆಚ್ಚ 3107 ಲಕ್ಷ ರೂ. ಇದರಿಂದ ಮಂಡ್ಯ ಜಿಲ್ಲೆಯಾದ್ಯಂತ ವಿದ್ಯುತ್ ಸರಬರಾಜಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸುಧಾರಣೆಯಾಗುವುದು.

ಪ್ರಶ್ನೆಯ ಸಂಖ್ಯೆ : 461

ಉತ್ತರ ಲಗತ್ತಿಸಿದೆ

ಶ್ರೀ ಎನ್. ತಮ್ಮಣ್ಣ : ಸನ್ಮಾನ್ಯ ಅಧ್ಯಕ್ಷರೆ, ಮಂಡ್ಯ ತಾಲ್ಲೂಕಿನ ಕೆರೆಗೋಡು ಹೋಬಳಿ ಹಂಪಾಪುರ ಗ್ರಾಮದಲ್ಲಿ 250 ಕೆ.ವಿ. ಪವರ್ ಸಬ್-ಸ್ಟೇಷನ್ ಮಂಜೂರು ಮಾಡುತ್ತೇವೆಂದು ಸರ್ಕಾರ ಹೇಳಿದೆ. ಇದಕ್ಕೆ ಲಭ್ಯವಾಗಿರತಕ್ಕ 25 ಎಕರೆ ಜಮೀನನ್ನೂ ಸಹ ಸರ್ಕಾರ ಮಂಜೂರು ಮಾಡಿದೆ. ಇದಕ್ಕೆ ಕೇಂದ್ರದ ಪವರ್ ಫೈನಾನ್ಸ್ ಕಾರ್ಪೊರೇಷನ್‌ನಿಂದ ಅನುಮತಿ ದೊರಕಿದೆಯೇ? ಆ ರೀತಿ ದೊರಕಿದ್ದರೆ ಜನವರಿ 95ರವರೆಗೆ ಏಕೆ ಕಾಯುತ್ತೀರಿ?